**ಅರ್ಜಿ ಸಂಖ್ಯೆ IV ಮತ್ತು V ರ ಆದೇಶದ ಮೇರೆಗೆ ದಿನಾಂಕಃ 27.07.2026 ರಂದು ಸಾಕ್ಷಿಗೆ ಪುನಃ ಕರೆ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ Sri. ACV ವಕೀಲರಿಂದಃ**

ಈ ದಿನ ನ್ಯಾಯಾಲಯಕ್ಕೆ ನಾನು ನನ್ನ ಹೆಚ್ಚಿ ಪ್ರಮಾಣ ಪತ್ರ ಮತ್ತು ಅದರ ಪೂರಕವಾಗಿ ಹೆಚ್ಚಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

1. 2 Discharge Summary Cards marked as Ex.P. 16
2. 19 Medical bills marked as Ex.P. 17

**ಪಾಟೀ ಸವಾಲು 2 ನೇ ಎದುರುದಾರರ ಪರ Smt. HM ವಕೀಲರಿಂದಃ**

ಈಗ ನನ್ನ ಮಗನಿಗೆ 17 ವರ್ಷವಾಗಿದ್ದು ಮತ್ತು 2nd PUC ಯಲ್ಲಿ ವಿದ್ಯಾಭ್ಯಾಸ ಮಾಡುತಿರುತ್ತಾರೆ. ಅಪಘಾತದಲ್ಲಿ ಅವನಿಗೆ ತಲೆಗೆ ಯಾವುದೇ ಗಾಯವಾಗಿಲ್ಲ, ಕಾಲಿಗೆ ಮಾತ್ರವಾಗಿರುತ್ತದೆಂದರೆ ನಿಜ. ನಿಪಿ.16 ರಲ್ಲಿರುವ 2 discharge summary ಗಳನ್ನು ಯಾರು ಬರೆದಿರುತ್ತಾರೆ ಮತ್ತು ಅವುಗಳಿಗೆ ಯಾವುದೇ ಮೊಹರು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ದಾಖಲೆಗಳನ್ನು ನಾವು discharge ಆಗುವಾಗ ಪಡೆದಿರುತ್ತೇವೆ. ಸದ್ರಿ ನಿಪಿ. 16 ದಾಖಲೆಗಳನ್ನು computer ನಲ್ಲಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ. 17 ವೈದ್ಯಕಿಯ ಬಿಲ್ ಅಪಘಾತದಲ್ಲಿ ಆದ ಗಾಯಕ್ಕೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ಅವುಗಳಲಲಿರುವ credit bill ಗಳ ಬಗ್ಗೆ ಹಣ ಸಂದಾಯ ಮಾಡಿದ ಕುರಿತು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ನಿಜ. ಅವುಗಳ ಬಗ್ಗೆ final bill ನಲ್ಲಿ ತೋರಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಡಾ. ಲತೀಶ ರವರು ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೇಳಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ನಿಜ. ನಿಪಿ. 17 ರಲ್ಲಿರುವ ಕ್ರ.ಸಂಖ್ಯೆ 19 ರಲ್ಲಿರುವ ನ್ನು ಬಿಲ್ ನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ

ನಿಪಿ. 17 ರಲ್ಲಿರುವ ಎಲ್ಲಾ ಬಿಲ್ ನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಸದ್ರಿ ದಾಖಲೆಗಳನ್ನು ಮೊದಲೇ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ನಿಜ. ಹೆಚ್ಚಿನ ಪರಿಹಾರ ಸಿಗಲೆಂದು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

(ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಆರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಜಿಲ್ಲೆ, ಮಂಗಳೂರು